# ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಘನ ನ್ಯಾಯಾಲಯ ಬ್ಯಾಡಗಿ.
## ಕ್ರಿಮಿನಲ್ ಪ್ರಕರಣ ಸಂಖ್ಯೆ: 144/2019

ಪಿಡಬ್ಲ್ಯೂ: 6

ಸಿಡಬ್ಲ್ಯೂ: 6

ಹೆಸರು : ಬಸವರಾಜ ತಂದೆ ಶಿವಪ್ಪ ಇದ್ದಲಗಿ

ವಯಸ್ಸು : 25 ವರ್ಷ

ಉದ್ಯೋಗ : ಕಾರಕೂನ

ವಾಸಸ್ಥಳ : ಬ್ಯಾಡಗಿ

ದಿನಾಂಕ : 14.09.2022 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ :**

1) ಚಾಸಾ-1 ರವರು ಮತ್ತು ಚಾಸಾ-5 ರವರು ಬ್ಯಾಡಗಿ-ರಟ್ಟೀಹಳ್ಳಿ ರಸ್ತೆಯಲ್ಲಿ ಓಂ ಕಮ್ಯೂನಿಕೇಷನ್ ಎಂಬ ನಾಮದೇಯದ ಮೊಬೈಲ್ ಅಂಗಡಿಯನ್ನು ನಡೆಸುತ್ತಾ ಇದ್ದು, ಸದರಿ ಅಂಗಡಿಯಲ್ಲಿ ನಾನು ಏರಟೆಲ್ ಕಂಪನಿಯ ಪ್ರಮೋಟರ್ ಎಂದು 2018 ರಿಂದ 2020 ರವರೆಗೆ ಕೆಲಸ ಮಾಡಿರುತ್ತೇನೆ. ಆ ಸಮಯದಲ್ಲಿ ಅಂದರೆ ದಿಃ 18.12.2018 ರಂದು ರಾತ್ರಿ 09-30 ಗಂಟೆ ಸುಮಾರಿಗೆ ಚಾಸಾ-1 ರವರು ಮತ್ತು ನಾನು ಮೊಬೈಲ್ ಅಂಗಡಿಯನ್ನು ಮುಚ್ಚಿ ಮನೆಗೆ ತೆರಳಿರುತ್ತೇವೆ .

2) ನಂತರ ಮಾರನೇ ದಿನ ಬೆಳಗ್ಗೆ ಸುಮಾರು 07-00 ಗಂಟೆಗೆ ಚಾಸಾ-1 ರವರು ಬೆಳಗ್ಗೆ 07-00 ಗಂಟೆ ಸುಮಾರಿಗೆ ದೂರವಾಣಿ ಕರೆಯನ್ನು ಮಾಡಿ ನಮ್ಮ ಅಂಗಡಿಯ ಶೆಟ್ಟರನ್ನು ಮುರಿದು ಯಾರೋ ಕಳ್ಳತನ ಮಾಡಿರುತ್ತಾರೆ ಎಂದು ತಿಳಿಸಿದ್ದು, ನಂತರ ಸುಮಾರು 09-00 ಗಂಟೆಗೆ ನಾನು ಕೆಲಸ ಮಾಡುತ್ತಿದ್ದ ಓಂ ಕಮ್ಯೂನಿಕೇಷನ್ ಅಂಗಡಿಗೆ ತೆರಳಿದಾಗ ಅಲ್ಲಿ ಜನರು ಸೇರಿದ್ದರು ಮತ್ತು ಪೋಲೀಸರು ಸಹ ಬಂದಿದ್ದರು. ಆ ಸಮಯದಲ್ಲಿ ಚಾಸಾ-1 ಮತ್ತು ಚಾಸಾ-5 ರವರು ಘಟನಾ ಸ್ಥಳಕ್ಕೆ ಬಂದಿದ್ದರು. ನಮ್ಮ ಅಂಗಡಿಯ ಮುಂದೆ ಒಂದು ಮುರಿದ ಬೀಗ, ರಾಡ ಹಾಗೂ ಸ್ಕ್ರ್ಯೂ ಡ್ರೈವರ ಕೆಳಗೆ ಬಿದ್ದಿದ್ದು ಕಂಡುಬಂದಿರುತ್ತದೆ. ಸದರಿ ಮುದ್ದೆ ಮಾಲುಗಳು ಈಗಾಗಲೇ ಮು.ಮಾ-1 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ.

3) ಘಟನೆಯ ಬಗ್ಗೆ ಚಾಸಾ-1 ರವರು ಪೋಲೀಸರಿಗೆ ಮಾಹಿತಿ ಮತ್ತು ದೂರನ್ನು ನೀಡಿರುತ್ತಾರೆ. ನಾನು ದಿಃ 20.12.2018 ರಂದು ಪೋಲೀಸರಿಗೆ ಘಟನೆಯ ಬಗ್ಗೆ ಹೇಳಿಕೆಯನ್ನು ನೀಡಿದ್ದು, ದಿಃ 28.12.2018 ರಂದು ಪೋಲೀಸರು ಕಳುವು ಮಾಡಿದ ಆರೋಪಿತರನ್ನು ಪೋಲೀಸರು ನನಗೆ ಪೋಲೀಸ ಠಾಣೆಯಲ್ಲಿ ತೋರಿಸಿರುತ್ತಾರೆ. ಆರೋಪಿತರುಗಳು ರೆಡ್ ಮೀ, ಸ್ಯಾಮಸಂಗ್ , ಒಪ್ಪೋ, ವಿವೋ ಹಾಗೂ ಲಾವಾ ಕಂಪನಿಯ ಒಟ್ಟು 31 ಮೊಬೈಲ್ ಸ್ಮಾರ್ಟ ಫೋನಗಳು ಕಳುವು ಆದದ್ದು ಕಂಡು ಬಂದಿರುತ್ತದೆ. ಕಳುವು ಗೈದ ಮೊಬೈಲಗಳನ್ನು ಸಾಕ್ಷಿಯು ನಿಪಿ-10 ರಿಂದ ನಿಪಿ-22 ವರೆಗೆ ಕಾಣುವ ಭಾವಚಿತ್ರದಲ್ಲಿ ನೋಡಿ ಗುರುತಿಸಿರುತ್ತಾರೆ. ಇಂದು ನ್ಯಾಯಾಲಯದಲ್ಲಿ 1 ನೇ ಆರೋಪಿತನು ಹಾಜರಿದ್ದು,

ಆತನನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. 2 ನೇ ಆರೋಪಿತನು ಗೈರು ಹಾಜರಿದ್ದು, ಆತನ ಗುರುತು ಪತ್ತೆಗಾಗಿ ಆತನ ಪರ ವಕೀಲರು ತಕರಾರು ಇಲ್ಲವೆಂದು ನುಡಿದಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :**

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸ ಅದೆ.

ಸಹಿ/-
ಜೆಎಂಎಫ್‌ಸಿ, ಬ್ಯಾಡಗಿ.